ವರ್ತುಲ ರಸ್ತೆ ನಿರ್ಮಾಣಕ್ಕೆ ಬೇಕಾಗುವ ಭೂ ಸ್ವಾಧೀನ ಕ್ರಮ ಅಂತಿಮ ಘಟ್ಟದಲ್ಲಿದ್ದು ಇನ್ನು ಒಂದು ತಿಂಗಳಲ್ಲಿ ಭೂ ಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಆ) ಕುಡಿಯುವ ನೀರಿನ ಯೋಜನೆಯ ಕಾಮಗಾರಿಗಳ ಕಾರ್ಯವು 98ರ ಮೇ ಮಾಹೆಯಲ್ಲಿ ಮತ್ತು ಒಳಚರಂಡಿ ಯೋಜನೆಗಳ ಕಾಮಗಾರಿಗಳನ್ನು 98ರ ಜೂನ್ ಮಾಹೆಯಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ. ವರ್ತುಲ ರಸ್ತೆಗೆ ಸಂಬಂಧಿಸಿದಂತೆ ಭೂಸ್ವಾಧೀನ ಪ್ರಕ್ರಿಯೆ ಮುಗಿದ ನಂತರ ಗುತ್ತಿಗೆದಾರರನ್ನು ನಿಗದಿಪಡಿಸಲು ಟೆಂಡರ್ ಕರೆಯಲಾಗುವುದು.

ವಿಷಯ: ಮೈಸೂರಿನ ನರಸಿಂಹರಾಜ ಕ್ಷೇತ್ರದಲ್ಲಿ ನಿವೇಶನ ಸಕ್ರಮಗೊಳಿಸಲು ಬಂದಿರುವ ಅರ್ಜಿಗಳು.

1062 (1443)

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನರಸಿಂಹರಾಜ ಕ್ಷೇತ್ರದಲ್ಲಿ ಎಷ್ಟು ರೆವಿನ್ಯೂ ಬಡಾವಣೆಗಳಿವೆ? ನಿವೇಶನ ಸಕ್ರಮಗೊಳಿಸಲು ಅರ್ಜಿಗಳನ್ನು ವಿತರಿಸಲಾಗಿದೆಯೇ? ಈ ಅರ್ಜಿಗಳನ್ನು ಯಾರ ಮೂಲಕ ವಿತರಿಸಲಾಗುತ್ತಿದೆ?

ಆ) ಇದುವರೆವಿಗೂ ವಿತರಿಸಲಾದ ಎಷ್ಟು ಅರ್ಜಿಗಳನ್ನು ವಾಪಸ್ ಪಡೆಯಲಾಗಿದೆ? ಯಾವ ಯಾವ ಬಡಾವಣೆಗಳಿಗೆ ಇನ್ನೂ ಅರ್ಜಿಗಳನ್ನು ವಿತರಿಸಬೇಕಾಗಿದೆ?

ಇ) ರೆವಿನ್ಯೂ ನಿವೇಶನ ಸಕ್ರಮಗೊಳಿಸುವಲ್ಲಿ ಸಂಗ್ರಹಿಸಿರುವ ಹಣವೆಷ್ಟು? ಮೈಸೂರು ನಗರ ಪಾಲಿಕೆಯವರು ಇನ್ನು ಎಷ್ಟು ಹಣ ಸಂಗ್ರಹಿಸಬಹುದೆಂದು ನಿರೀಕ್ಷಿಸಲಾಗಿದೆ; ಈ ಹಣವನ್ನು ಇನ್ನು ಎಷ್ಟು ತಿಂಗಳಲ್ಲಿ ಸಂಗ್ರಹಿಸುವ ಗುರಿ ಹೊಂದಿರುತ್ತಾರೆ?

ಶ್ರೀ ಮೀರಾಜುದ್ದೀನ್ ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):

ಅ) ನರಸಿಂಹರಾಜ ಕ್ಷೇತ್ರದಲ್ಲಿ 19 ರೆವಿನ್ಯೂ ಬಡಾವಣೆಗಳಿವೆ. ರೆವಿನ್ಯೂ ನಿವೇಶನಗಳನ್ನು ನಗರ ಪಾಲಿಕೆಯು ಸಕ್ರಮಗೊಳಿಸುತ್ತಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ: ಕುಂದಾಪುರ ಪುರಸಭೆಯ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ.

1063 (1707)

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ಪುರಸಭೆಯ ಒಳಚರಂಡಿ ವ್ಯವಸ್ಥೆಗೆ ಸಾರ್ವಜನಿಕರಿಂದ ವಂತಿಗೆ ಪಡೆಯಲಾಗಿದೆಯೇ? (ವಂತಿಗೆ ನೀಡಿದವರ ಹೆಸರು, ವಿಳಾಸ ಮತ್ತು ಮೊಬಲಗು ತಿಳಿಸುವುದು)

ಆ) ಒಳಚರಂಡಿ ವ್ಯವಸ್ಥೆಗೆ ತಾಂತ್ರಿಕ ಪರಿಣಿತರ ಅಭಿಪ್ರಾಯ ಪಡೆಯಲಾಗಿದೆಯೇ?

ಇ) ಪಡೆದಿದ್ದಲ್ಲಿ ತಾಂತ್ರಿಕ ಪರಿಣಿತರ ಸಲಹೆ ಏನು?

ಈ) ಪಡೆಯದಿದ್ದಲ್ಲಿ ಸಾರ್ವಜನಿಕ ಹಣ ದುರುಪಯೋಗವಾದಂತಾಗುವುದಿಲ್ಲವೆ?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):

ಅ) ಇಲ್ಲ.

ಆ) ಕುಂದಾಪುರ ಪಟ್ಟಣದ ಒಳಚರಂಡಿ ಯೋಜನೆಯ ಅನುಷ್ಠಾನದ ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಲು ಖಾಸಗಿ ಕನ್ಸಲ್ಟಿಂಗ್ ಸಂಸ್ಥೆಗೆ ವಹಿಸಲಾಗಿದೆ.

ಇ) (ಆ)ದಲ್ಲಿ ತಿಳಿಸಿದಂತೆ ವರದಿ ಹಾಗೂ ಸಲಹೆ ಇನ್ನೂ ಬಂದಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ವಿಷಯ: ದ.ಕ. ಹಾಗೂ ಉಡುಪಿ ಜಿಲ್ಲೆಗಳಲ್ಲಿ ಗಿರಿಜನ ಉಪ ಯೋಜನೆಯಡಿಯಲ್ಲಿ ಮನೆ ರಿಪೇರಿಗೆ ಮೀಸಲಿರಿಸಿದ ಅನುದಾನ.

1054 (1708)

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗೆ ಸಮಾಜ ಕಲ್ಯಾಣ ಇಲಾಖೆಯಿಂದ